ಸೋಲೂರು ಗ್ರಾಮದಲ್ಲಿ ಬಸ್ ನಿಲುಗಡೆ

843(1120); ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಅ) ಮಾಗಡಿ ತಾಲ್ಲೂಕು, ಸೋಲೂರು ಗ್ರಾಮದಲ್ಲಿ ಹಾಸನ ವಿಭಾಗಕ್ಕೆ ಸೇರಿದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ನಿಲುಗಡೆ ಮಾಡಲು ಆದೇಶವಿದ್ದರೂ ನಿಲುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಬಸ್ಸುಗಳನ್ನು ನಿಲುಗಡೆ ಮಾಡದಿರುವ ಚಾಲಕ ಮತ್ತು ನಿರ್ವಾಹಕರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಇ) ಸೋಲೂರು ಗ್ರಾಮದಲ್ಲಿ ಬಸ್ಸುಗಳನ್ನು ನಿಲುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಹೌದು

ಆ) ಹಾಸನ ವಿಭಾಗದ ವಿವಿಧ ಘಟಕಗಳಿಂದ ಬೆಂಗಳೂರಿಗೆ ಹೋಗುವಾಗ ಹಾಗೂ ವಾಪಸ್ ಬರುವ ವಾಹನಗಳಿಗೆ (ಪ್ರತಿಷ್ಠಿತ, ಅಂತರರಾಜ್ಯ, ತಡೆರಹಿತ & ನಿಗಧಿತ ನಿಲುಗಡೆ ಸಾರಿಗೆಗಳನ್ನು ಹೊರತುಪಡಿಸಿ) **ಸೋಲೂರು** ಗ್ರಾಮದಲ್ಲಿ ನಿಲುಗಡೆ ನೀಡಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿ ಕಾರ್ಯನಿರ್ವಹಣೆ ಮಾಡುವಂತೆ ಈ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಗಮನಕ್ಕೆ ತಂದು ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿತ್ತು. ಆದಾಗ್ಯೂ ಈ ಬಗ್ಗೆ ಎಲ್ಲಾ ಚಾಲಕ & ನಿರ್ವಾಹಕರ ಗಮನಕ್ಕೆ ತರಲಾಗಿದೆ.

ನಿರ್ದಿಷ್ಟ ಮಾಹಿತಿಯನ್ನೊಳಗೊಂಡ ದೂರುಗಳು ಬಂದಿರುವುದಿಲ್ಲ. ಆದುದರಿಂದ ಬಸ್ಸುಗಳನ್ನು ನಿಲುಗಡೆ ಮಾಡದಿರುವ ಚಾಲಕ ಮತ್ತು ನಿರ್ವಾಕರನ್ನು ಗುರುತಿಸಲು ಕಷ್ಟವಾಗಿರುರುವುದರಿಂದ ಯಾವುದೇ ಶಿಸ್ತಿನ ಕ್ರಮ ಕೈಗೊಂಡಿರುವುದಿಲ್ಲ.

ಇ) ರಾಷ್ಟ್ರೀಯ ಹೆದ್ದಾರಿ–48ರ ಸೋಲೂರು ಗ್ರಾಮದಲ್ಲಿ ನಿಗಮದ ತುಮಕೂರು, ಹಾಸನ, ಚಿಕ್ಕಮಗಳೂರು ವಿಭಾಗಗಳ ಘಟಕಗಳಿಂದ ಕಾರ್ಯಚರಣೆ ಮಾಡುವ ವಾಹನಗಳಿಗೆ ನಿಲುಗಡೆ ನೀಡಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿ ಕಾರ್ಯಚರಣೆ ಮಾಡಲಾಗುತ್ತಿದೆ.

ಮುಂದುವರೆದು, ಹಾಸನ ವಿಭಾಗದ ವಿವಿಧ ಘಟಕಗಳಿಂದ ಬೆಂಗಳೂರಿಗೆ ಹೋಗುವಾಗ ಹಾಗೂ ವಾಪಸ್ ಬರುವ ವಾಹನಗಳಿಗೆ (ಪ್ರತಿಷ್ಠಿತ, ಅಂತರರಾಜ್ಯ, ತಡೆರಹಿತ & ನಿಗಧಿತ ನಿಲುಗಡೆ ಸಾರಿಗೆಗಳನ್ನು ಹೊರತುಪಡಿಸಿ) **ಸೋಲೂರು** ಗ್ರಾಮದಲ್ಲಿ ಕಡ್ಡಾಯವಾಗಿ ನಿಲುಗಡೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಹೊಸ ಬಸ್ಸುಗಳು

844(1171); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) 2013–14 ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಡಿಪೋಗಳಿಗೆ ನೀಡಿದ ಹೊಸ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಹಿರೇಕೆರೂರು ಘಟಕದಲ್ಲಿ ಬಸ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹೊಸ ಬಸ್‌ಗಳನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) 2013–14 ನೇ ಸಾಲಿನಲ್ಲಿ 48 ಘಟಕಗಳಿಗೆ ಒಟ್ಟು 353 ಹೊಸ ಬಸ್ಸುಗಳನ್ನು ನೀಡಿದೆ.

ಆ) ಹೌದು

ಇ) 2013–14 ನೇ ಸಾಲಿನ ಕಾರ್ಯ ಯೋಜನೆಯನ್ವಯ ಹಿರೇಕೆರೂರು ಘಟಕಕ್ಕೆ ಒಟ್ಟು 9 ಹೊಸ ವಾಹನಗಳನ್ನು ಒದಗಿಸಬೇಕಿದ್ದು,